# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 68
ಸದಸ್ಯರ ಹೆಸರು : ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ. ( ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ : 13-09-2021
ಉತ್ತರಿಸುವ ಸಚಿವರು : ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ರಾಜ್ಯದಲ್ಲಿ ನಮ್ಮ ನಾಡಿನ ಪಾರಂಪರಿಕ ಕಲೆಗಳಾದ ಕಂಸಳೆ, ಚೌಡಿಕೆ, ವೀರಭದ್ರುಕುಣಿತ ಡೋಲು ಬಡಿತ, ನಾದಸ್ವರ ಕಲಿಕೆಯಂತಹ ಕಲೆಗಳನ್ನು ಉಳಿಸುವ ಮತ್ತು ಬೆಳಸುವ ನಿಟ್ಟಿನಲ್ಲಿ ಸರ್ಕಾರದ ಯೋಜನೆಗಳು ಯಾವುದಾದರೂ ಇವೆಯೇ (ಇದ್ದಲ್ಲಿ ಮಾಹಿತಿ ನೀಡುವುದು) | ನಮ್ಮ ನಾಡಿನ ಪಾರಂಪರಿಕ ಕಲೆಗಳಾದ ಕಂಸಾಳೆ, ಚೌಡಿಕೆ, ವೀರಭದ್ರುಕುಣಿತ ಡೋಲು ಬಡಿತ, ನಾದಸ್ವರ ಕಲಿಕೆಯಂತಹ ಕಲೆಗಳನ್ನು ಉಳಿಸುವ ಮತ್ತು ಬೆಳಸುವ ನಿಟ್ಟಿನಲ್ಲಿ ಗುರುಶಿಷ್ಯ ಪರಂಪರೆ ಯೋಜನೆಯನ್ನು ರೂಪಿಸಿ ಪಾರಂಪರಿಕ ಕಲೆಗಳನ್ನು ಬೆಳೆಸಲು ಎಲ್ಲಾ ಜಿಲ್ಲೆಗಳಲ್ಲಿ ತರಬೇತಿಗಳನ್ನು ಏರ್ಪಡಿಸಲಾಗುತ್ತಿದೆ.<br>ಇಲಾಖೆಯಿಂದ ಹಮ್ಮಿಕೊಳ್ಳುವ ಉತ್ಸವಗಳು, ಜಯಂತಿ, ಜನಪರ/ಗಿರಿಜನ ಉತ್ಸವ, ರಾಜ್ಯೋತ್ಸವ, ಯುವಸೌರಭ, ಚಿಗುರು ಇತ್ಯಾದಿ ಕಾರ್ಯಕ್ರಮಗಳಲ್ಲಿ ಪಾರಂಪರಿಕ ಕಲೆಗಳಿಗೆ ಪ್ರೋತ್ಸಾಹ ನೀಡಿ ವೇದಿಕೆ ಕಲ್ಪಿಸಿ ನಿಯಮಾನುಸಾರ ಗೌರವ ಸಂಭಾವನೆಯನ್ನು ಪಾವತಿಸಲಾಗುತ್ತಿದೆ.<br>ಕರ್ನಾಟಕ ಜಾನಪದ ಅಕಾಡೆಮಿಯಲ್ಲಿ ಜನಪದ ಕಲೆಗಳಾದ ಕಂಸಾಳೆ, ಚೌಡಿಕೆ, ವೀರಭದ್ರ ಕುಣಿತ ಕಲೆಗಳನ್ನು ಉಳಿಸಿ ಬೆಳಸುವ ನಿಟ್ಟಿನಲ್ಲಿ ತರಬೇತಿ ಶಿಬಿರಗಳನ್ನು ನಡೆಸಲಾಗುತ್ತಿದೆ. ತರಬೇತಿ ಪಡೆದ ತಂಡಗಳಿಗೆ ರಾಜ್ಯದ ವಿವಿಧ ಭಾಗಗಳಲ್ಲಿ ಕಾರ್ಯಕ್ರಮಗಳನ್ನು ಪ್ರದರ್ಶಿಸಲು ಅವಕಾಶ ಕಲ್ಪಿಸುತ್ತಿದೆ.<br>ಪಾರಂಪರಿಕ ಕಲೆಗಳನ್ನು ಮುಂದುವರೆಸುತ್ತಿರುವ ಕಲಾವಿದರುಗಳಿಗೆ ವಾದ್ಯಪರಿಕರ/ ವೇಷಭೂಷಣ ಖರೀದಿಸಲು ಸೇವಾಸಿಂಧುವಿನಲ್ಲಿ ಅರ್ಜಿಸಲ್ಲಿಸಿದಲ್ಲಿ ನಿಯಮಾನುಸಾರ ಪರಿಶೀಲಿಸಿ ಪ್ರೋತ್ಸಾಹಧನವನ್ನು ನೀಡುವ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ. |
| ಆ. | ಡೋಲುಬಡಿತ, ನಾದಸ್ವರದ ಕಲಿಕೆಗೆ ಹೆಚ್ಚಿನ ಬೇಡಿಕೆಯಿದ್ದು ಇದನ್ನು ಕಲಿಸುವ ಶಾಲೆಗಳನ್ನು ಜಿಲ್ಲೆಗೊಂದರಂತೆ ಸ್ಥಾಪಿಸಲು ಹಾಗೂ ಇವುಗಳ ಬಗ್ಗೆ ಹೆಚ್ಚಿನ ಅಧ್ಯಯನವನ್ನು ಮಾಡಿ ಕಲೆಗಳನ್ನು ಉಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು: ( ವಿವರ ನೀಡುವುದು) | ಅನ್ವಯಿಸುವುದಿಲ್ಲ. |

ಕಡತ ಸಂಖ್ಯೆ: ಕಸಂವಾ 51 ಕವಿಸ 2021

(ವಿ.ಸುನಿಲ್ ಕುಮಾರ್)
ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು.